IX. ಮಂಡ್ಯ ತಾಲ್ಲೂಕು ಶಿವಪುರದಲ್ಲಿ ಮುನಾಫರ್‌ಖಾನೆಯನ್ನು ಬಡಾವಣೆ ಮಾಡತಕ್ಕ ಬಗ್ಗೆ 1,645 ರೂಪಾಯಿಗಳಿಗೆ ಬಂದು ಅಂದಾಜಾವನ್ನು ತಯಾರ್ಮಾಡಿ ಮಂಜೂರಾಗಲು ಇಲ್ಲಿಗೆ ಕಳುಹಿಸಿರುವ ಮಂಡ್ಯ ತಾಲ್ಲೂಕು ಅಮಿಲರ 9-1-09ನೆ ಮತ್ತು ಂ 644ನೆ ನಂಬರು ರಿಪೋರ್ಟನ್ನು ಓದಲಾಯಿತು.

ಮೈಸೂರು ಡಿವೀಜ್ ಎಕ್ಸಿಕ್ಯೂಟಿವ್ ಇಂಜನಿಯರವರು ಮೀಟಿಂಗಿನ ಕಾಲದಲ್ಲಿ ಹಾಜರಿದ್ದು ಸದರೀ ಅಂದಾಜವನ್ನು ಮತ್ತು ಪ್ಲಾನನ್ನು ನೋಡಿ ಬಿಪ್ಪರುವರಾದ ಕಾರಣ ಮೇಲ್ಕಂಡ ಅಂದಾಜವನ್ನು ಮಂಜೂರ್ಮಾಡಬಹುದೆಂದೂ ಖರ್ಚನ್ನು ಚಾಲ್ತಿ ಸಾಲಿನ ಬಜ್ಜೆಟ್ಟಿನಲ್ಲಿ "Building repairs" ಹೆಡ್ಡಿಗೆ ಪ್ರೊವೈಡಾಗಿರುವ ಮೊಬಲಗಿನಿಂದ ಕೊಡಬಹುದೆಂದು ತೀರ್ಮಾನವಾಯಿತು.

X. ಮೇಲ್ಕೋಟೆಯಲ್ಲಿ ಒಬ್ಬ ನೇಟಿವ್ ವೈದ್ಯನಿಗೆ ಅಲೋಯರ್ಸ್ ಕೊಡಿಸಬೇಕೆಂದು ಶಿಪಾರ್ಸಾಗಿ ಬಂದಿರುವ ಫ್ರೆಂಚ್ ರಾಕ್ಸ್ ಸಬ್ ಡಿವೀಜ್ ಆಫಿಸರವರ 8—12—08ನೆ ಮತ್ತು ಂ 143ನೆ ನಂಬರ್ ಯಾದಿ ಓದಲಾಯಿತು.

ಸದರೀ ಸ್ಥಳದಲ್ಲಿ ಬಂದು ಡಿಸ್ಪೆನ್ಸರಿಯನ್ನು ಏರ್ಪಡಿಸುವದಕ್ಕಾಗಿ ಕೂಡ್ಲೆ ಗೌರ್ಮೆಂಟಿಗೆ ಬರಿಸಬೇಕೆಂದು ತೀರ್ಮಾನವಾಯಿತು.

XI. ಕಳೆದ ಮೀಟಿಂಗಿನಿಂದೀಚಿಗೆ ಪ್ರೆಸಿಡೆಂಟರಿಂದ ಮಂಜೂರಾದ 500 ರೂಪಾಯಿಗಳಿಗೆ ಕಮ್ಮಿಯುಳ್ಳ ಕಾಂಗಾರಿಗಳ ಪಟ್ಟಿಯನ್ನು ಬೋರ್ಡಿನವರಿಂದ ಬಿಪ್ಪಿಕೊಳ್ಳಲಾಯಿತು.

XII. ಮೇಲ್ಕೋಟೆಯಲ್ಲಿ ವೈರಮುಡಿ ಜಾತ್ರೆ ಕಾಲದಲ್ಲಿ ನೀರನ್ನು ಅನುಕೂಲ ಪಡಿಸತಕ್ಕ ಬಗ್ಗೆ, ಚಾಲ್ತಿ ಸಾಲಿನ ಬಜ್ಜೆಟ್ಟಿನಲ್ಲಿ ಪ್ರೊವೈಡಾಗಿರುವ ಡಿಸ್ಟ್ರಿಕ್ಟ್ ಫಂಡು ಗ್ರಾಂಟಿನಿಂದ 500 ರೂಪಾಯಿಗಳನ್ನು ಕೊಡಲು ಮಂಜೂರಾಗಬಹುದೆಂದು ತೀರ್ಮಾನವಾಯಿತು.

XIII. 1909—1910ನೆ ಸಾಲಿಗೆ ಎಲ್ಲಾ ತಾಲ್ಲೂಕು ಬೋರ್ಡುಗಳಿಂದಲೂ ತಲಪಿರುವ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ ಅಂದಾಜುಗಳನ್ನು ಓದಲಾಯಿತು.

ಅಲಾಯಿದಾ ಮೆಮೊದಲ್ಲಿ ಉದಹರಿಸಿರುವಂತೆ ತಿದ್ದುಪಾಟುಗಳೊಡನೆ ಸದರೀ ಬಜ್ಜೆಟ್ಟುಗಳನ್ನು ಮಂಜೂರ್ಮಾಡಬಹುದೆಂದು ತೀರ್ಮಾನವಾಯಿತು.

ಕೆಳಗೆ ನಮೂದಿಸಿರುವಂತೆ ಗೋಪ್ಯಾರೆಯನ್ನ ಬೋರ್ಡಿನವರಿಂದ ಪ್ಯಾಸ್ ಮಾಡಲಾಯಿತು.

				ರೂ.
1909—1910ನೆ ಸಾಲಿಗೆ ತರಬಹುದಾದ ಕಳೆದ ಸಾಲ್ ಬಾಕಿ	...	...	...	59,406
1909—1910ನೆ ಸಾಲಿಗೆ ಅಂದಾಜಾ ಪ್ರಕಾರ ಜಮಾ ಮೊಬಲಗು			...	1,62,400
		ಜುಮ್ಲಾ	...	2,21,816
ಖರ್ಚು ಬಾಬುಗಳು.				
A. ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ	...	...	...	73,932
B. ರವಿನ್ಯೂ ಡಿಪಾರ್ಟುಮೆಂಟಿನಿಂದ	...	...	...	61,621
C. ಸಿವಿಲ್ ಖೂರ್ಜಗಳು	...	...	...	66,246
		ಜುಮ್ಲಾ ಖರ್ಚು	...	2,01,806
		ಸಾಲ್ ಆಖೈರು ಬಾಕಿ	...	20,000

XIV. ಬೋರ್ಡಿನ ಮುಂದಿನ ಮೀಟ್ಟಿಂಗು 1909ನೆ ಇಸವಿ ಮೇ ಮಾಹೆ 29ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಯುವದೆಂದು ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 16ನೆ ಮಾರ್ಚಿ 1909.

ಮೈಸೂರು ಶೀಮೆಯ ಲೇಟ್ ಚೀಫ್ ಕಮಿಷ್ನರವರಿಂದ ಕೊಡಲ್ಪಟ್ಟ 17—4—1867ನೆ ಮತ್ತು ಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿವಮೊಗ್ಗ ಡಿಸ್ಟ್ರಿಕ್ಟು ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಂಣಪ್ಪನೆಂಬುವನು ತನ್ನ ಸ್ವಂತ ಖಾತೆ ಪಾಳು ನಿವೇಶನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಖಿತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು: ಇವುಗಳೆಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಬಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗು ಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕಿದ ನಾಣ್ಯಗಳಿಂದ ತಯಾರಾದ್ದು.

ಭಂಗಾರದ ಹಿಂಬಳಿ ಜೊತೆ ಬಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಚೂರು ಮತ್ತು ಬಿಸಿಗೆ ಚೂರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳೇ ಇಕ್ಕೇರಿ ಬಂಣ.

ಭಂಗಾರದ ಗಟ್ಟು ಬಂದು ಚೂರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳೇ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಬಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ಮಾರಾಟದಿಂದ ಉತ್ಪತ್ತಿ ಆದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕು ದಾರರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕ ಬಗ್ಗೆ ದರಖಾಸ್ತು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಗೆ ಖುದ್ದಾಗಿಯಾಗಲಿ ವಜಂಟರ ಮೂಲಕವಾಗಲಿ ತಿವನೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷರ್ಷರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಸ್ ಸ್ 1909ನೆ ಇಸವಿ ಫೆಬ್ರವರಿ ತಾರೀಖು 12ನೆ ಶುಕ್ರವಾರ ನಡದ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗಿನ ನಡವಳಿಕೆಗಳು.

ಹಾಜರು.

1. ಕೆ. ಆರ್. ಶ್ರೀನಿವಾಸೈಯ್ಯಂಗಾರ್ರು, ಎಸ್‌ಕ್ವೈಯರ್, ಎಂ. ಎ., ಪ್ರೆಸಿಡೆಂಟರು.

ಉದ್ಯೋಗ ಪ್ರಯುಕ್ತರಾದ ಮೆಂಬರುಗಳು.

ಹಾಜರು.

2. ಮಿ॥ ಸಿ. ರಂಗನಾಥರಾವ್ ಸಾಹೇಬ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರು.
3. ,, ವಿ. ಮುತ್ತುಸಾಮಿದಾಸ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ಗೈರ್ ಹಾಜರು.

4. ,, ಬಿ. ವೆಂಕೋಬರಾವ್, ಡಿವಿಜನಲ್ ಅಸಿಸ್ಟೆಂಟು ಕಮಿಷನರು.
5. ,, ಹೆಚ್. ಎಸ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರು.
6. ,, ಎಸ್. ರಾಮರಾವ್, ಎಗ್ಜಿಕ್ಯೂಟಿವ್ ಇಂಜಿನಿಯರವರು.

ಉದ್ಯೋಗ ಪ್ರಯುಕ್ತರಲ್ಲದ ಮೆಂಬರುಗಳು.

ಹಾಜರು.

7. ಮಿ॥ ಬಾಬಾಸಾಹೇಬರು.
8. ,, ಹೆಚ್. ಕೇಶವಾಚಾರ್ರು.
9. ,, ಬಿ. ರಂಗೆಂಣನವರು.
10. ,, ಹೆಚ್. ವಾಟ್ಸ್‌ಸಾಹೇಬರು.
11. ,, ಸಿ. ಶ್ರೀನಿವಾಸರಾಯರು.
12. ,, ಯಜಮಾನ ರಾಂಭಟ್ಟರು.
13. ,, ನಾಡಿಗ ಭಿಷ್ಟಪ್ಪನವರು.
14. ,, ಆನವಟ್ಟಿ ರಂಗರಾಯರು.
15. ,, ಟಿ. ಶ್ರೀನಿವಾಸಯ್ಯಂಗಾರ್ರು.
16. ,, ಪುರದಪ್ಪನವರು.
17. ,, ಟಿ. ನರಸಿಂಹೈಯ್ಯಂಗಾರ್ರು.